O.S. 264/2013
D.W.5

**ಸಾಕ್ಷಿಯನ್ನು ದಿನಾಂಕಃ 17-04-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 3 ನೇ ಪ್ರತಿವಾದಿ ಪರ ವಕೀಲರಿಂದಃ**

3 ನೇ ಪ್ರತಿವಾದಿ ಪರ ವಕೀಲರು 3 ನೇ ಪ್ರತಿವಾದಿಯು ದಾವಾ ಆಸ್ತಿಯ ಖರೀದಿದಾರನಾಗಿದ್ದು, 5 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ತನಗೆ ಷೇರು ಇದೆ ಎಂದು ಹೇಳುತ್ತಿರುವ ಕಾರಣ ಅದು 3 ನೇ ಪ್ರತಿವಾದಿಯ ಹಿತಾಸಕ್ತಿಗೆ ಧಕ್ಕೆಯಾಗುತ್ತಿದ್ದು, ಆ ಕಾರಣ ಪಾಟೀ ಸವಾಲು ಮಾಡಲು ಅವಕಾಶ ಕೋರಿರುವರು, ಅವಕಾಶ ನೀಡಲಾಗಿದೆ.

ನನ್ನ ತಂದೆಯ ಹೆಸರು ಚಂದ್ರಶೇಖರಯ್ಯ. ನನ್ನ ತಂದೆಗೆ ಮೂವರು ಹೆಣ್ಣು ಮಕ್ಕಳು ಹಾಗೂ ಒಬ್ಬಾತ ಮಗ. 1 ನೇ ಪ್ರತಿವಾದಿ ನನ್ನ ಅಣ್ಣ ಎಂದರೆ ಸರಿ. 4 ರಿಂದ 6 ನೇ ಪ್ರತಿವಾದಿಗಳು ನನ್ನ ಸಹೋದರಿಯರು ಎಂದರೆ ಸರಿ. ನನ್ನ ತಂದೆ ಮೃತಪಡುವ ಕಾಲಕ್ಕೆ ನನಗೆ ಸುಮಾರು 4 ವರ್ಷವಾಗಿತ್ತು. ಆ ಸಮಯದಲ್ಲಿ ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ನಮ್ಮ ಮನೆತನದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ವಿವಾಹವು 30 ವರ್ಷಗಳ ಹಿಂದೆ ನಡೆದಿರುತ್ತದೆ. ನನ್ನ ಮದುವೆಯ ಖರ್ಚು ವೆಚ್ಚಗಳನ್ನು ನನ್ನ ತಾಯಿ ಹಾಗೂ 1 ನೇ ಪ್ರತಿವಾದಿ ನೋಡಿಕೊಂಡಿರುವರು ಎಂದರೆ ಸರಿಯಲ್ಲ. ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ವಾದಿ ದಾವೆಯಲ್ಲಿ ಯಾವ ಪರಿಹಾರವನ್ನು ಕೇಳಿರುವರು ಎಂದು ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿಯು ಸಲ್ಲಿಸಿರುವ ತಕರಾರಿನ ಕುರಿತು ನಾನು ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ.

2 ನೇ ವಾದಿ ಹಾಗೂ 1 ನೇ ಪ್ರತಿವಾದಿಯರ ವಿವಾಹವು ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮದುವೆಯು ಯಾವ ದಿನಾಂಕದಂದು ನೊಂದಣಿಯಾಗಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ವಿವಾಹಕ್ಕೆ ಹಾಜರಾಗಿದ್ದೆನು, ಆದರೆ ನೊಂದಣಿಯಾಗುವ ಸಮಯಕ್ಕೆ ನಾನು ಇರಲಿಲ್ಲ. ಮದುವೆಯ ಕಾಲಕ್ಕೆ ನಮ್ಮ ಕುಟುಂಬದವರು ಎಲ್ಲರೂ ಇದ್ದರು. ನನ್ನ ತಾಯಿ ಮೃತಪಟ್ಟಿರುವರು. ಇತ್ತೀಚೆಗೆ ನನ್ನ ತಾಯಿಗೆ ಪಾರ್ಶ್ವವಾಯು ಬಂದಿತ್ತು ಎಂದರೆ ಸರಿ. ಆಕೆಯ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು 1 ನೇ ಪ್ರತಿವಾದಿ ನನ್ನ ಅಣ್ಣ ನೋಡಿಕೊಳ್ಳುತ್ತಿದ್ದನು. ನಾನು ನನ್ನ ಗಂಡನ ಮನೆಯಾದ ಅಲಗಿಲವಾಡದಲ್ಲಿ ವಾಸವಿದ್ದೇನೆ. 1 ನೇ ಪ್ರತಿವಾದಿ ಅಲಗಿಲವಾಡ ಗ್ರಾಮದಲ್ಲಿ ಗುರುಬಸವರಾಜ ತಂದೆ ಕೊಟ್ರಯ್ಯ ಇವರಿಂದ ರೂ.40,000/-ಕ್ಕೆ ಮನೆಯನ್ನು ನನ್ನ ಹೆಸರಿಗೆ ನೊಂದಾಯಿಸಲು ಸಿದ್ಧತೆ ನಡೆಸಿದ್ದನು ಎಂದರೆ ಸರಿಯಲ್ಲ. ನಾನು ಈಗ ಅದೇ ಮನೆಯಲ್ಲಿದ್ದೇನೆ ಎಂದರೆ ಸರಿ.

O.S. 264/2013
D.W.5

ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ತಂದೆಯ ಹೆಸರಿನಲ್ಲಿ ಬೇರೆ ಆಸ್ತಿ ಇರುವುದಿಲ್ಲ. ನನ್ನ ತಾಯಿ ಜೀವಂತ ಇದ್ದಾಗ ಆಕೆ ಹಾಗೂ 1ನೇ ಪ್ರತಿವಾದಿ ದಿಃ28.02.1996 ರಂದು ರೂ.40,100/-ಕ್ಕೆ 3ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಯ ಕರಾರನ್ನು ಬರೆದುಕೊಟ್ಟಿರುವವರು ಎಂದರೆ ಸರಿಯಲ್ಲ. ಆ ವಿಚಾರ ಗೊತ್ತಿದ್ದರು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಿನ ನನ್ನನ್ನು ಪಾರ್ವತಮ್ಮ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವವರು. ಸದರಿ ಕ್ರಯ ಕರಾರಿನ ಆಧಾರದ ಮೇಲೆ 3ನೇ ಪ್ರತಿವಾದಿ ನನ್ನ ತಾಯಿ ಹಾಗೂ ಅಣ್ಣನಾದ 1ನೇ ಪ್ರತಿವಾದಿಯ ವಿರುದ್ಧ ಓ ಎಸ್ ನಂ.65/2013 ರಂತೆ ಇದೇ ನ್ಯಾಯಾಲಯದಲ್ಲಿ ನಿರ್ಧಿಷ್ಟ ಕರಾರು ಪರಿಪಾಲನಾ ದಾವೆಯನ್ನು ಸಲ್ಲಿಸಿರುವವನು ಎಂದರೆ ಸರಿ. ಸದರಿ ದಾವೆ ದಿಃ23.03.2013 ರಂದು ರಾಜಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಆ ದಾವೆ ಡಿಕ್ರಿಯಾದ ನಂತರ 3ನೇ ಪ್ರತಿವಾದಿ ನನ್ನ ತಾಯಿ ಹಾಗೂ 1ನೇ ಪ್ರತಿವಾದಿಯ ವಿರುದ್ಧ ಅಮಲ್ಜಾರಿ ಪ್ರಕರಣವನ್ನು ಈ.ಪಿ. ನಂ.18/2013 ರಂತೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕೇಸಿನಲ್ಲಿ ವಾದಿಗಳು ತಮ್ಮ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ. ನಾನು ಓ ಎಸ್ ನಂ.65/2013 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. 3ನೇ ಪ್ರತಿವಾದಿ ದಾವಾ ಆಸ್ತಿಯ ಸ್ವಾಧೀನ ಅನುಭವದಲ್ಲಿ ಇರುವವರು ಎಂದರೆ ಸರಿಯಲ್ಲ. ವಾದಿಯರು ಸ್ವಾಧೀನದಲ್ಲಿರುವವರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1ನೇ ಪ್ರತಿವಾದಿ 2ನೇ ವಾದಿಗೆ ಜೀವನಾಂಶ ನೀಡುವ ಸಲುವಾಗಿ ನಡೆದಿತ್ತು ಎಂದು ಹೇಳಲಾದ ಪಂಚಾಯಿತಿಗೆ ನಾನು ಹಾಜರಾಗಿರುವುದಿಲ್ಲ. ದಾವಾ ಆಸ್ತಿಯು 3ನೇ ಪ್ರತಿವಾದಿಯ ಸ್ವಾಧೀನದಲ್ಲಿದ್ದು, ವಾದಿಯರ ಅಥವಾ ಇತರೆ ಪ್ರತಿವಾದಿಗಳ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ ಹೆಚ್ಚಾದ್ಧ ಕಾರಣ ನಾನು ವಾದಿಯರ ಹಾಗೂ ಇತರ ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**

O.S. 264/2013
D.W.5